DECEMBER 28, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- ರಾಷ್ಟ್ರಪತಿ ದ್ರೌಪದಿ ಮುರ್ಮು, ಕಾರವಾರದ ಸೀ ಬರ್ಡ್ ನೌಕಾ ನೆಲೆಗೆ, ಇಂದು ಭೇಟಿ; ಜಲಾಂತರ್ಗಾಮಿಯಲ್ಲಿ ಪಯಣ.
- ಉತ್ತರಕನ್ನಡ ಜಿಲ್ಲೆ, ಮುಂಡಗೋಡದ, ಟಿಬೇಟಿಯನ್ ಕಾಲೋನಿಯಲ್ಲಿ, ಇಂದು ಬೌದ್ಧ ಸಮ್ಮೇಳನ; ಕೇಂದ್ರ ಸಚಿವ ಕಿರಣ ರಿಜಿಜು, ಉದ್ಘಾಟನೆ.
- ಕೃಷಿ ಉತ್ಪನ್ನಗಳಿಗೆ, ಕನಿಷ್ಟ ಬೆಂಬಲ ಬೆಲೆ ಖಾತ್ರಿ; ಜನವರಿ 8 ರಂದು, ಹೊಸ ದಿಲ್ಲಿಯಲ್ಲಿ, ರೈತ ಮುಖಂಡರ ಸಭೆ.
- ಪ್ರಧಾನಮಂತ್ರಿಯವರ 'ಮನದ ಮಾತು'; ಇಂದು ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

**ಈಗ ವಾರ್ತೆಗಳ ವಿವರ**

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ನಿನ್ನೆ ಸಂಜೆ ಗೋವಾಕ್ಕೆ ಆಗಮಿಸಿದ್ದು, ಇಂದು ಉತ್ತರಕನ್ನಡ ಜಿಲ್ಲೆ, ಕಾರವಾರದ ಸೀ ಬರ್ಡ್ ನೌಕಾ ನೆಲೆಗೆ ಭೇಟಿ ನೀಡಲಿದ್ದಾರೆ. ಜಲಾಂತಾರ್ಗಾಮಿ ನೌಕೆಯಲ್ಲಿ ಅವರು ಪ್ರಯಾಣಿಸಲಿದ್ದು, ಸಬ್‌ಮರೀನ್‌ನಲ್ಲಿ ಪ್ರಯಾಣ ಮಾಡಿದ, ಪ್ರಥಮ ಮಹಿಳಾ ರಾಷ್ಟ್ರಪತಿ ಎಂಬ, ಹೆಗ್ಗಳಿಕೆಗೆ ಭಾಜನರಾಗಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ನೌಕಾದಳದ ಹಿರಿಯ ಅಧಿಕಾರಿಗಳೊಂದಿಗೆ, ರಾಷ್ಟ್ರಪತಿಯವರನ್ನು ಸ್ವಾಗತಿಸಲಿದ್ದಾರೆ.

<><><>

ರಾಷ್ಟ್ರಪತಿಯವರ ಭೇಟಿ ಹಿನ್ನೆಲೆ, ಇಂದು ಬೆಳಗ್ಗೆಯಿಂದ ಮಧ್ಯಾಹ್ನ 3.30ರ ವರೆಗೆ, ಹಾರವಾಡ ದಿಂದ ಮಾಜಾಳಿ ವರೆಗಿನ, ಸಮುದ್ರ ತೀರದಲ್ಲಿ, ಮೀನುಗಾರಿಕೆ ನಿರ್ಬಂಧಿಸಿ, ಮೀನುಗಾರಿಕೆ ಇಲಾಖೆ, ಜಂಟಿ ನಿರ್ದೇಶಕರು, ಆದೇಶಿಸಿದ್ದಾರೆ.

<><><>

ನಾಳೆ, ಜಾರ್ಖಂಡ್ ರಾಜ್ಯದ, ಜೆಮ್‌ಶೆಡ್‌ಪುರದಲ್ಲಿ ನಡೆಯಲಿರುವ, ಓಲ್ ಚಿಕಿ ಲಿಪಿಯ ಶತಮಾನೋತ್ಸವ ಸಮಾರಂಭದಲ್ಲಿ, ರಾಷ್ಟ್ರಪತಿಯವರು ಭಾಗವಹಿಸಿ, ಬಳಿಕ, ಜೆಮ್‌ಶೆಡ್‌ಪುರ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ– ಎನ್.ಐ.ಟಿ. ಯ 15ನೇ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ನಾಡಿದ್ದು, 30 ನೇ ತಾರೀಖು, ದುಮ್ಕಾದಲ್ಲಿ ಅಂತಾರಾಜ್ಯ ಜನ ಸಾಂಸ್ಕೃತಿಕ ಸಮಾಗಮದ, ಸಮಾರೋಪ ಸಮಾರಂಭದಲ್ಲಿ, ರಾಷ್ಟ್ರಪತಿ ಮುರ್ಮು ಭಾಗವಹಿಸಲಿದ್ದಾರೆ.

<><><>

ಕೇಂದ್ರ ಸಂಸದೀಯ ವ್ಯವಹಾರ ಹಾಗೂ ಅಲ್ಪ ಸಂಖ್ಯಾತರ ಅಭಿವೃದ್ಧಿ ಖಾತೆ ಸಚಿವ ಕಿರಣ ರಿಜಿಜು, ಉತ್ತರಕನ್ನಡ ಜಿಲ್ಲೆ, ಮುಂಡಗೋಡದ, ಟಿಬೇಟಿಯನ್ ನಿರಾಶ್ರಿತರ ಪುನರ್ವಸತಿ ಕಾಲೋನಿಗೆ, ಇಂದು ಭೇಟಿ ನೀಡಲಿದ್ದಾರೆ. ಬೆಳಗ್ಗೆ 9.30ಕ್ಕೆ ಬೌದ್ಧ ಸಮ್ಮೇಳನವನ್ನು ಸಚಿವ ರಿಜಿಜು ಉದ್ಘಾಟಿಸಲಿದ್ದಾರೆ.

<><><>

ನೊಬೆಲ್ ಶಾಂತಿ ಪುರಸ್ಕಾರಕ್ಕೆ ಭಾಜನರಾದ, ಟಿಬೆಟಿಯನ್ ಧರ್ಮಗುರು, ಪೂಜ್ಯ 14 ನೇ ದಲೈ ಲಾಮಾ ಅವರು, ಮುಂಡಗೋಡದ, *ಡಿಯೋಗ್ಯುಲಿಂಗ್ ಟಿಬೆಟ್ ಸೆಟ್ಲಮೆಂಟ್‌ನ, ಡ್ರೆಪುಂಗ್ ಗೊಮಾಂಗ್ ಮಾನ್‌ಸ್ಟ್ರೀ* ಯಲ್ಲಿ 45 ದಿನಗಳ, ಬೌದ್ಧ ಬಿಕ್ಕುಗಳ, ಧಾರ್ಮಿಕ ಪಾರಾಯಣ ಹಾಗೂ ಸತ್ಸಂಗ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

<><><>

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಇಂದು ಉತ್ತರಕನ್ನಡ ಜಿಲ್ಲೆಯ, ಕಾರವಾರಕ್ಕೆ ಭೇಟಿ ನೀಡಲಿದ್ದಾರೆ. ಕಾರವಾರದ ರವೀಂದ್ರನಾಥ ಟ್ಯಾಗೋರ್ ಕಡಲ ತೀರದಲ್ಲಿ, ಇಂದು ಸಂಜೆ 7 ಗಂಟೆಗೆ, ಕರಾವಳಿ ಉತ್ಸವದಲ್ಲಿ ಭಾಗಿಯಾಗಲಿದ್ದಾರೆ.

<><><>

ಕಳೆದ ಕೆಲ ದಿನಗಳಿಂದ, ಹೆಚ್ಚು ಪ್ರಖರ ಶೀತಗಾಳಿ ಹಾಗೂ ಚಳಿ ಹಿನ್ನೆಲೆ, ತಾಪಮಾನ ಕನಿಷ್ಟ 7 ದಶಾಂಶ 5 ಡಿಗ್ರಿ ವರೆಗೆ ಇಳಿಯುತ್ತಿದ್ದು, ರಾಜ್ಯದ ಹಲವೆಡೆ, ಕಣ್ಣು ಬೇನೆ–'ಮದ್ರಾಸ್ ಐ' ಸೋಂಕು, ಕಂಡು ಬಂದಿದೆ. ಕಡಿಮೆ ಆರ್ದ್ರತೆ, ತಂಪು ಗಾಳಿ ಹಾಗೂ ರೇಡಿಯೇಟರ್ ಮತ್ತು ಸ್ಪೇಸ್ ಹೀಟರ್‌ಗಳ ಬಳಕೆಯಿಂದ, ಕಣ್ಣುಗಳಲ್ಲಿ ತೇವಾಂಶ ಕಡಿಮೆಯಾಗಿ, ನಿರ್ಜಲೀಕರಣದಿಂದ ಸೋಂಕು ಹೆಚ್ಚು ಹರಡುತ್ತದೆ ಎನ್ನುತ್ತಾರೆ, ಕಣ್ಣುಗಳ ತಜ್ಞರು. ಈ ಕುರಿತು, ಮುನ್ನೆಚ್ಚರಿಕೆ ವಹಿಸುವಂತೆ, ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವೈದ್ಯಕೀಯ ಮಹಾವಿದ್ಯಾಲಯದ, ನೇತ್ರ ತಜ್ಞೆ, ಡಾಕ್ಟರ್ ವಿಶಾಲಾಕ್ಷಿ, ಮನವಿ ಮಾಡಿದ್ದಾರೆ.

<><><>

ಡಾಕ್ಟರ್ ವಿಶಾಲಾಕ್ಷಿ ಧ್ವನಿ 60 ಸೆಕೆಂದುಗಳು

<><><>

ಕಳೆದ ಆರು ತಿಂಗಳಲ್ಲಿ, ಒಂದು ಸಾವಿರ ವಿದ್ಯಾರ್ಥಿಗಳನ್ನು ಮಾದಕ ವಸ್ತುಗಳ ಸೇವನೆ ಪರೀಕ್ಷೆಗೆ ಒಳಪಡಿಸಿದ್ದು, 50 ಜನ ಡ್ರಗ್ಸ್ ಸೇವಿಸುತ್ತಿರುವುದು, ವರದಿಯಿಂದ ದೃಢಪಟ್ಟಿದೆ ಎಂದು, ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರಕುಮಾರ ರೆಡ್ಡಿ ತಿಳಿಸಿದ್ದಾರೆ. ಮಂಗಳೂರು ಪೊಲೀಸ್ ಕಮಿಷನರೇಟ್ ಹಾಗೂ *'ಮೇಕ್ ಎ ಚೇಂಜ್ ಫೌಂಡೇಶನ್'* ಆಯೋಜಿಸಿರುವ, 'ನಶೆ ಮುಕ್ತ ಮಂಗಳೂರು ಅಭಿಯಾನ'ಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಮಂಗಳೂರಿನಲ್ಲಿ, ಮಾದಕ ವಸ್ತು ಬಳಕೆ ವಿರುದ್ಧ, ಶಾಲೆ–ಕಾಲೇಜುಗಳಲ್ಲಿ, ನಿರಂತರ ಜಾಗೃತಿ ಕಾರ್ಯ ಕೈಗೊಳ್ಳಲಾಗಿದೆ, ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೃಷಿ ಉತ್ಪನ್ನಗಳಿಗೆ, ಕನಿಷ್ಠ ಬೆಂಬಲ ಬೆಲೆ ಖಾತ್ರಿ ಕಾನೂನು ಜಾರಿಗಾಗಿ, ಜನವರಿ 8ನೇ ತಾರೀಖು, ಹೊಸ ದಿಲ್ಲಿಯಲ್ಲಿ, ರಾಷ್ಟ್ರ ಮಟ್ಟದ ರೈತ ಮುಖಂಡರ ಸಭೆ ನಡೆಯಲಿದೆ ಎಂದು, ಸಂಯುಕ್ತ ಕಿಸಾನ್ ಮೋರ್ಚಾ, ರಾಷ್ಟ್ರೀಯ ಮುಖಂಡ, ಜಗಜಿತ್‌ಸಿಂಗ್ ಧಲೆವಾಲ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ರಾಷ್ಟ್ರ ವ್ಯಾಪಿ ರೈತ ಚಳವಳಿಯ, ಭವಿ ್ಯದ ಕ್ರಮವನ್ನು ನಿರ್ಧರಿಸಲಾಗುತ್ತದೆ ಎಂದಿದ್ದಾರೆ.

<><><>

ರೈತ ಮುಖಂಡ, ಕುರುಬೂರು ಶಾಂತಕುಮಾರ ಮಾತನಾಡಿ, ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು, ಕಬ್ಬು ಬೆಳೆಗಾರರ ಸಂಕ ್ಟ ಅರಿತು, ಸರ್ಕಾರ ನಿಗದಿ ಪಡಿಸಿದ ಹೆಚ್ಚುವರಿ ದರ ನೀಡದೇ, ತಡೆಯಾಜ್ಞೆ ತರ ಬಯಸಿದ್ದ, ಸಕ್ಕರೆ ಕಾರ್ಖಾನೆ ಮಾಲಿಕರಿಗೆ ಸೂಕ್ತ ಎಚ್ಚರಿಕೆ ನೀಡಿ, ಹಿತ ಕಾಯ್ದಿದ್ದಾರೆ ಎಂದರು.

<><><>

ಆಕಾಶವಾಣಿಯ, ಬಹುಶ್ರುತ, 'ಮನ್ ಕಿ ಬಾತ್' ಕಾರ್ಯಕ್ರಮ, ಇಂದು ಭಾನುವಾರ ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 129ನೇ ಆವೃತ್ತಿಯ ಮನದ ಮಾತನ್ನು, ಎಲ್ಲ ಆಕಾಶವಾಣಿ ಕೇಂದ್ರಗಳು, ದೂರದರ್ಶನ ವಾಹಿನಿಗಳು ಹಾಗೂ ಪಿ.ಎಂ.ಒ ಕಚೇರಿಯ, ಯೂಟ್ಯೂಬ್ ವಾಹಿನಿ ಬಿತ್ತರಿಸಲಿದೆ. ಬಳಿಕ, ಕನ್ನಡ ಸೇರಿದಂತೆ, ಪ್ರಾದೇಶಿಕ ಭಾಷೆಗಳಲ್ಲಿ, ಮನದ ಮಾತು ಅವತರಣಿಕೆ ಪ್ರಸಾರವಾಗಲಿದೆ.

<><><>

ಹೆಸರಾಂತ ನಿಸರ್ಗ ಛಾಯಾಗ್ರಾಹಕರಾದ, ಬೆಳಗಾವಿಯ ಪ್ರದೀಪ ವಾಸುನಕರ, ಅಮೃತ ಚರಂತಿಮಠ ಹಾಗೂ ಲಿಂಗರಾಜ ಜಗಜಂಪಿ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ,ಕಲಾ ಮಂದಿರದಲ್ಲಿ, 4 ದಿನಗಳ ಅಪರೂಪದ ಛಾಯಾಚಿತ್ರಗಳ ಪ್ರದರ್ಶಿನಿ, ಏರ್ಪಡಿಸಿದ್ದರು. 'ರೈಡ್, ಟ್ರೆಕ್, ಕ್ಲಿಕ್' ಧ್ಯೇಯದೊಂದಿಗೆ ಆಯೋಜಿಸಿದ್ದ, ನಿಸರ್ಗ ಹಾಗೂ ವನ್ಯಜೀವಿ ಛಾಯಾಚಿತ್ರ ಪ್ರದರ್ಶಿನಿ, ಪರಿಸರಾಸಕ್ತರ ಗಮನ ಸೆಳೆದು, ನಿನ್ನೆಗೆ ಯಶಸ್ವಿ ಸಮಾರೋಪಗೊಂಡಿತು.

<><><>

ಬೆಳಗಾವಿಯ ಪರಿಸರವಾದಿ, ಇಂದು ಪ್ರದೀಪ ವಾಸುನಕರ ಈ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಇಂದು ಪ್ರದೀಪ ವಾಸುನಕರ್ ಧ್ವನಿ 50 ಸೆಕೆಂದುಗಳು

<><><>

'ಸಂಸದರ ಕ್ರೀಡಾ ಮಹೋತ್ಸವ ಮಾಸಿಕ'ದ ಹಿನ್ನೆಲೆ, 17 ವರ್ಷದೊಳಗಿನ ಕ್ರೀಡಾಪಟುಗಳಿಗೆ ಆಯೋಜಿಸಿದ್ದ, ವಿವಿಧ ಕ್ರೀಡೆಗಳಲ್ಲಿ, ಧಾರವಾಡದ ಜೆ.ಎಸ್.ಎಸ್. ಕನ್ನಡ ಮಾಧ್ಯಮ ಪ್ರೌಢ ಶಾಲೆಯ, ಪ್ರಣಮ್ಯಾ ಹಡಗಲಿ ಭಾಗವಹಿಸಿ, ಹಲವು ಪುರಸ್ಕಾರಗಳೊಂದಿಗೆ, 13 ಸಾವಿರ ರೂಪಾಯಿ ನಗದು ಬಹುಮಾನ ಗಳಿಸಿದ್ದಾರೆ. 'ಖೇಲೋ ಇಂಡಿಯಾ; ಫಿಟ್ ಇಂಡಿಯಾ' ಧ್ಯೇಯದಡಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಆಯೋಜಿಸಿದ, ಕ್ರೀಡಾ ಸ್ಪರ್ಧೆಗಳಲ್ಲಿ, ಪ್ರಣಮ್ಯಾ ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನ, ಉದ್ದ ಜಿಗಿತದಲ್ಲಿ ದ್ವಿತೀಯ ಸ್ಥಾನ ಹಾಗೂ 100 ಮೀಟರ್ ಓಟದಲ್ಲಿ ತೃತೀಯ ಸ್ಥಾನಗಳಿಸಿದ್ದಾರೆ.

<><><>

ಹುಬ್ಬಳ್ಳಿ–ಧಾರವಾಡ, ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರದ, ಮುಂದಿನ ಹಂತದ ಅಭಿವೃದ್ಧಿ ಕಾಮಗಾರಿಗಳ ಕುರಿತು, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಹಾಗೂ ಪದಾಧಿಕಾರಿಗಳು, ಗದಗ ಜಿಲ್ಲೆಯ ಹುಲಕೋಟಿಯಲ್ಲಿ, ಸಚಿವ ಎಚ್.ಕೆ. ಪಾಟೀಲ ಅವರನ್ನು ಭೇಟಿ ಮಾಡಿ, ಚರ್ಚಿಸಿದರು. ಇನ್ ಕಾಮೆಕ್ಸ 2026, ಕೈಗಾರಿಕಾ ವಸ್ತು ಪ್ರದರ್ಶನಕ್ಕೆ, ಸರ್ಕಾರದಿಂದ ಅಗತ್ಯ ಅನುದಾನ ಒದಗಿಸುವಂತೆ, ನಿಯೋಗ ಸಚಿವರಿಗೆ ಮನವಿ ಮಾಡಿತು. ಸಚಿವ ಎಚ್.ಕೆ. ಪಾಟೀಲ ಅವರು, ಸಕಾರಾತ್ಮಕವಾಗಿ ಸ್ಪಂದಿಸಿ, ರಾಜ್ಯದ ಕೈಗಾರಿಕಾ ಬೆಳವಣಿಗೆಗೆ, ಸಕಲ ರೀತಿಯ ಸಹಕಾರ ನೀಡುವ, ಭರವಸೆ ನೀಡಿದ್ದಾಗಿ, ಪ್ರಕಟಣೆ ತಿಳಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಷ್ಟ್ರಪತಿ ದ್ರೌಪದಿ ಮುರ್ಮು, ಕಾರವಾರದ ಸೀ ಬರ್ಡ್ ನೌಕಾ ನೆಲೆಗೆ, ಇಂದು ಭೇಟಿ; ಜಲಾಂತರ್ಗಾಮಿಯಲ್ಲಿ ಪಯಣ.
- ಉತ್ತರಕನ್ನಡ ಜಿಲ್ಲೆ, ಮುಂಡಗೋಡದ, ಟಿಬೇಟಿಯನ್ ಕಾಲೋನಿಯಲ್ಲಿ, ಇಂದು ಬೌದ್ಧ ಸಮ್ಮೇಳನ; ಕೇಂದ್ರ ಸಚಿವ ಕಿರಣ ರಿಜಿಜು, ಉದ್ಘಾಟನೆ.
- ಕೃಷಿ ಉತ್ಪನ್ನಗಳಿಗೆ, ಕನಿಷ್ಟ ಬೆಂಬಲ ಬೆಲೆ ಖಾತ್ರಿ; ಜನವರಿ 8 ರಂದು, ಹೊಸ ದಿಲ್ಲಿಯಲ್ಲಿ, ರೈತ ಮುಖಂಡರ ಸಭೆ.
- ಪ್ರಧಾನಮಂತ್ರಿಯವರ 'ಮನದ ಮಾತು'; ಇಂದು ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>